ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
**North-West Karnataka Road Transport Corporation**
ಕೇಂದ್ರ ಕಚೇರಿ–ಗೋಕುಲ ರಸ್ತೆ ಹುಬ್ಬಳ್ಳಿ
**Central Offices Gokul Road Hubballi –580030**
(ಕಾರ್ಮಿಕ ಮತ್ತು ಕಲ್ಯಾಣ ಇಲಾಖೆ)

ಸಂ:ವಾಕರಸಾಸಂ/ಕೇಂಕ/ಹು/ಕಾರ್ಮಿಕ/ಎಲ್-1/ 1061 /21-22 ದಿನಾಂಕ: 11 - 03-2022

**: ಪ್ರಕಟಣೆ :**

**ವಿಷಯ :** ಸಂಸ್ಥೆಯ ಆಸ್ಪತ್ರೆಗೆ ಕಿರಿಯ ಲ್ಯಾಬ್ ಟೆಕ್ನಿಶಿಯನ್‌ರವನ್ನು ಅರೇಕಾಲಿಕ ಮಾಸಿಕ ಗೌರವ ಸಂಭಾವನೆಯ ಆಧಾರದ ಮೇಲೆ ನಿಯೋಜಿಸಿಕೊಳ್ಳುವ ಕುರಿತು.

-o-

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಆಸ್ಪತ್ರೆ, ಗೋಕುಲ ರಸ್ತೆ ಹುಬ್ಬಳ್ಳಿಯಲ್ಲಿ ಈ ಕೆಳಕಂಡ ಹುದ್ದೆಯನ್ನು ಅರೇಕಾಲಿಕ ಮಾಸಿಕ ಗೌರವ ಸಂಭಾವನೆಯ ಆಧಾರದ ಮೇಲೆ ನಿಯೋಜಿಸಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ | ಹುದ್ದೆ | ಅರೇಕಾಲಿಕ ಮಾಸಿಕ ಗೌರವ ಸಂಭಾವನೆ ಮೇಲೆ ನಿಯೋಜನೆ ಅವಶ್ಯಕ ವಿದ್ಯಾರ್ಹತೆ | ಹುದ್ದೆಗಳು | ಗೌರವ ಸಂಭಾವನೆ |
|---|---|---|---|---|
| 1 | ಕಿರಿಯ ಲ್ಯಾಬ್ ಟೆಕ್ನಿಶಿಯನ್ | ದ್ವಿತಿಯ ಪಿ.ಯು.ಸಿಯಲ್ಲಿ ರಸಾಯನ ಶಾಸ್ತ್ರವನ್ನು ಒಂದು ವಿಷಯವನ್ನಾಗಿ ಪಡೆದು ಉತ್ತೀರ್ಣರಾಗಿರಬೇಕು & 12 ತಿಂಗಳು Laboratory Technician Training ನ್ನು ಸರ್ಕಾರದಿಂದ ಮಾನ್ಯತೆ ಪಡೆದ ಯಾವುದಾದರೊಂದು ಸಂಸ್ಥೆಯಲ್ಲಿ ಪೂರ್ಣಗೊಳಿಸಿದ ಪ್ರಮಾಣ ಪತ್ರ ಹೊಂದಿರಬೇಕು. | ಹುದ್ದೆಗಳ ಸಂಖ್ಯೆ – 01 | ರೂ.10,000/- ಮಾಹೆಯಾನ |

1) ಅರೇಕಾಲಿಕ ಮಾಸಿಕ ಗೌರವ ಸಂಭಾವನೆಯ ಆಧಾರದ ಮೇಲೆ ನಿಯೋಜನೆಗೊಳ್ಳುವ ಕಿರಿಯ ಲ್ಯಾಬ್ ಟೆಕ್ನಿಶಿಯನ್ ರವರಿಗೆ ಗೌರವ ಸಂಭಾವನೆ ರೂ.10,000/- ಮಾಹೆಯಾನ ನೀಡಲಾಗುವುದು. ಇದರ ಹೊರತಾಗಿ ಇತರೇ ಯಾವುದೇ ಭತ್ಯಗಳಿಗೆ ಅರ್ಹರಿರುವುದಿಲ್ಲ.
2) ಈ ಅರೇಕಾಲಿಕ ನೇಮಕವು ಯಾವುದೇ ರೀತಿಯ ಖಾಯಂ ನೇಮಕಾತಿಯನ್ನು ಅಥವಾ ಸಂಸ್ಥೆಯಲ್ಲಿ ಯಾವುದೇ ಸೇವಾ ಪ್ರಯೋಜನೆಯನ್ನು ಪಡೆಯುವ ಅಭ್ಯರ್ಥನದ ಹಕ್ಕನ್ನು ನೀಡುವುದಿಲ್ಲ.
3) ಈ ನಿಯೋಜನೆಯು ತಾತ್ಕಾಲಿಕವಾಗಿದ್ದು, ಸಂಸ್ಥೆಯ ವತಿಯಿಂದ ಪೂರ್ಣಾವಧಿ ಕಿರಿಯ ಲ್ಯಾಬ್ ಟೆಕ್ನಿಶಿಯನ್ ಹುದ್ದೆಗೆ ನೇಮಕಾತಿಗೊಳಿಸಿದ ನಂತರ ಅಥವಾ ಅಸಮರ್ಪಕ ಸೇವೆ ಕಂಡು ಬಂದಲ್ಲಿ ಯಾವುದೇ ಸಮಯದಲ್ಲಿ ಮುನ್ಸೂಚನೆ ನೀಡಲಾರದೇ ರದ್ದುಗೊಳಿಸಬಹುದಾಗಿರುತ್ತದೆ.
4) ಕಿರಿಯ ಲ್ಯಾಬ್ ಟೆಕ್ನಿಶಿಯನ್‌ರು ಸಂಸ್ಥೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಅವರ ಅವಲಂಬಿತರಿಗೆ ವೈದ್ಯರು ಸೂಚಿಸುವ ತಪಾಸಣೆಗೊಳಪಡಿಸಿ ವೈದ್ಯಕೀಯ ಸಲಹೆ ಮತ್ತು ಶುಶ್ರೂಷೆ ನೀಡುವುದು.
5) ಕಿರಿಯ ಲ್ಯಾಬ್ ಟೆಕ್ನಿಶಿಯನ್‌ರು ಸಂಸ್ಥೆಯ ನಿಗದಿತ ಕೆಲಸದ ಅವಧಿಯಲ್ಲಿ ಪ್ರತಿನಿತ್ಯ ಆಸ್ಪತ್ರೆಯ ಕಚೇರಿಯ ಅವಧಿಯಲ್ಲಿ ಕಾರ್ಯನಿರ್ವಹಿಸುವುದು.
6) ವೈದ್ಯರು ಸೂಚಿಸುವ ಅವಶ್ಯಕ ತಪಾಸಣೆಗಳನ್ನು ಮಾಡಿ ಅಗತ್ಯ ಸಲಹೆ ಸೂಚನೆಗಳನ್ನು ಚಿಕಿತ್ಸೆಗೆ ಸಂಬಂಧಿಸಿದಂತೆ ನೀಡುವುದು.
7) ಸಂಸ್ಥೆಯ ಚಿಕಿತ್ಸಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ಬಹಿರಂಗಗೊಳಿಸಬಾರದು.
8) ಸಂಸ್ಥೆಯ ಅಧಿಕಾರಿ/ನೌಕರರ ಹಾಗೂ ಅವರ ಅವಲಂಬಿತರ ಚಿಕಿತ್ಸಾ ಮಾಹಿತಿಯನ್ನು ವೈದ್ಯರ ಅನುಮತಿ ಇಲ್ಲದೆ ಅನ್ಯರಿಗೆ ನೀಡಬಾರದು.

ಈ ಮೇಲಿನಂತೆ ಷರತ್ತು ಮತ್ತು ನಿಬಂಧನೆಗಳಿಗೆ ಒಪ್ಪಿದಲ್ಲಿ ಲಿಖಿತ ರೂಪದಲ್ಲಿ ಅರ್ಜಿ ಸಲ್ಲಿಸಲು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರ ಸಹಿತ ವಿದ್ಯಾರ್ಹತೆ, ಅನುಭವ, ಜನ್ಮ ದಿನಾಂಕ. ಇನ್ನಿತರೇ ಸಂಪೂರ್ಣ ಮಾಹಿತಿಯನ್ನು ನಮೂದಿಸಿ ಅರ್ಜಿಯನ್ನು ದಾಖಲೆಗಳ ನಕಲು ಪ್ರತಿಯೊಂದಿಗೆ **ದಿನಾಂಕ: 31-03-2022** ರೊಳಗಾಗಿ ಕಚೇರಿಯ ಸಮಯದಲ್ಲಿ ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿಗಳು, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಚೇರಿ, ಗೋಕುಲ ರಸ್ತೆ, ಹುಬ್ಬಳ್ಳಿ–580 030 ರವರಿಗೆ ಸಲ್ಲಿಸಲು ಅಥವಾ E-mail: clwo.nwkrtc@karnataka.gov.in ಮೂಲಕ ಕಳುಹಿಸಬಹುದಾಗಿದೆ.

**ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ**

D:\Lab-01\ಗೌರವ ವೈದ್ಯರನ್ನು ಮುಂದುವರೆಸುವ ಕಡತ.doc